

# ಹಾಳಾದ ಕಾರು ಮತ್ತು ನಿಂತುಹೋದ ಬಾಳು

**ನಮ್ಮೆಲ್ಲರ ಬದುಕಿನಲ್ಲಿಯೂ ಒಂದಲ್ಲಾ ಒಂದು ಸಲ ಬಂದಿರಬಹುದಾದ ಸಾಮಾನ್ಯ ಘಟನೆಯೊಂದರ ಮೂಲಕ, ಪಾತ್ರಗಳ ಒಳಬದುಕಿನ ಕಥೆಯನ್ನು ಧ್ವನಿಸಲು ಯತ್ನಿಸುವ ಕಿರುಚಿತ್ರವಿದು. ನಮ್ಮ ಬದುಕಿನ ಭಾಗವೇ ಆದವರು ಬಿಟ್ಟುಹೋದಾಗ, ತನ್ನನ್ನು ತಾನೇ ಸಂಭಾಳಿಸಿಕೊಂಡು ಮುಂದಕ್ಕೆ ಸಾಗಬೇಕಾದ ಹಂತದಲ್ಲಿ ಎದುರಾಗುವ ಭಾವುಕ ಸಂಘರ್ಷವನ್ನು ಈ ಕಿರುಚಿತ್ರ ಪರಿಣಾಮಕಾರಿಯಾಗಿ ಕಟ್ಟಿಕೊಡುತ್ತದೆ.**

■ **ಗೌರಿ**

ಎಷ್ಟೋ ಸಲ ನಮ್ಮೊಳಗೆ ಕಟ್ಟಿಹಿಡಿದ ದುಃಖ ಕಟ್ಟೊಡೆಯಲು ಒಂದು ನೆಪಕ್ಕಾಗಿ ಕಾಯುತ್ತಿರುತ್ತದೆ. ಆ ನೆಪಕ್ಕೂ ದುಃಖದ ಕಾರಣಕ್ಕೂ ಸಂಬಂಧವೇ ಇಲ್ಲದಿರಬಹುದು. ಹಾಗೆ ನೋಡಿದರೆ ಒಂದಕ್ಕೊಂದು ಸಂಬಂಧವೇ ಇಲ್ಲದಂತೆ ಕಾಣುವ ಎಷ್ಟೋ ಸಂಗತಿಗಳಿಂದಲೇ ಅಲ್ಲವೇ ಈ ಬದುಕು ಇಡಿಯಾಗಿ ರೂಪುಗೊಂಡಿರುವುದು.

ಇಂಥದ್ದೇ ಒಂದು ಆರ್ದ್ರ ಕ್ಷಣದ ಸುತ್ತ ಹೆಣೆದ ಕಿರುಚಿತ್ರ 'ಆರ್ ಯು ಸ್ಟಿಲ್ ದೇರ್?'. ಪಾರ್ಕಿಂಗ್ ಪ್ರದೇಶದಲ್ಲಿ ಕಾರುಕೆಟ್ಟು ನಿಂತ ಹುಡುಗಿಯೊಬ್ಬಳ ತಳಮಳದ ಗಳಿಗೆಯ ಮೂಲಕ ಈ ಕಿರುಚಿತ್ರ ಪ್ರಾರಂಭವಾಗುತ್ತದೆ. ಪಾರ್ಕಿಂಗ್ ಪ್ರದೇಶದಲ್ಲಿ ನಿಲ್ಲಿಸಿದ್ದ ಹುಡುಗಿಯ ಕಾರು ಸ್ಟಾರ್ಟ್ ಆಗುತ್ತಿಲ್ಲ. ಅವಳು ಸಹಾಯವಾಣಿಯಾದ 'ಎಎಎ'ಗೆ ಕಾಲ್ ಮಾಡಲು ಯತ್ನಿಸುತ್ತಿದ್ದಾಳೆ. ಆದರೆ ಅಲ್ಲಿ ಅವಳ ಹೆಸರಿನಲ್ಲಿ ಖಾತೆ ಇಲ್ಲ. ಅವಳ ತಂದೆಯ ಹೆಸರಿನಲ್ಲಿದೆ. ಅಮ್ಮನಿಗೆ ಕಾಲ್ ಮಾಡಿದರೆ, ಕಾರ್ ಕೆಟ್ಟು ಹೋಗಿದೆ ಎಂದು ಗೊತ್ತಾದ ತಕ್ಷಣ, ವಿಂಡೊ ಡೋರ್ ಹಾಕಿಕೋ, ಬಾಗಿಲು ಮುಚ್ಚಿಕೋ ಎಂದೆಲ್ಲ ಎಚ್ಚರಿಕೆಗಳನ್ನು ಕೊಡುತ್ತಾಳೆ. ಯಾರೋ ಸಹಾಯ ಮಾಡಬೇಕೇ ಎಂದು ಕೇಳಿದರೆ, 'ನನ್ನ ತಂದೆ ಇನ್ನೇನು ಬಂದುಬಿಡುತ್ತಾರೆ' ಎಂದು ಮಗಳು ಉತ್ತರಿಸುತ್ತಾಳೆ. ಸಹಾಯವಾಣಿಗೆ ಕರೆ ಮಾಡಿ ತಂದೆ ಹೆಸರು ಹೇಳಿದರೆ ಖಾತೆ ಪತ್ತೆಯಾಗುವುದಿಲ್ಲ. ಹುಡುಗಿಗೆ ದುಗುಡ ಹೆಚ್ಚಾಗಿ ಕಣ್ಣೀರು ಹರಿಯುತ್ತದೆ. ಕೊನೆಯಲ್ಲಿ ಅವಳ ಅಮ್ಮನೇ ಬಂದು ಬ್ಯಾಟರಿ ಚಾರ್ಜ್ ಮಾಡಿ ಹೊರಡುತ್ತಾರೆ.

> **ಹೆಸರು:** ಆರ್ ಯು ಸ್ಟಿಲ್ ದೇರ್?
> **ನಿರ್ಮಾಣ:** ರೀಫ್ ಓಲ್ಡ್‌ಬರ್ಗ್
> **ನಿರ್ದೇಶನ:** ರೇಯ್ಯಾ ಝುತಾಬ್‌ಚಿ ಮತ್ತು ಸ್ಯಾಮ್ ಡೆವಿಸ್
> **ನಟನೆ:** ಸಫಾ ತಾರೀಫಿ, ರಿಮಾ ಹದ್ದದ್
> **ಛಾಯಾಗ್ರಹಣ ಮತ್ತು ಸಂಕಲನ:** ಸ್ಯಾಮ್ ಡೆವಿಸ್

ವಾಸ್ತವದಲ್ಲಿ ಅವಳ ತಂದೆ ಈಗ ಬದುಕಿಲ್ಲ. ತಂದೆ ಬದುಕಿಲ್ಲ ಎಂಬ ಸಂಗತಿಯನ್ನು ನಿರ್ದೇಶಕರು ಎಲ್ಲಿಯೂ ಪ್ರಸ್ತಾಪಿಸುವುದಿಲ್ಲ. ಆದರೆ ತಾಯಿಯ ಕಾರಿನ ಹಿಂಭಾಗದಲ್ಲಿ ತಂದೆಯ ಟೋಪಿ ಇರುವುದನ್ನು ಮಗಳು ಎತ್ತಿಕೊಳ್ಳುತ್ತಾಳೆ. ಅದರ ಮೂಲಕವೇ ಅವನ ಅನುಪಸ್ಥಿತಿಯನ್ನು ದಾಟಿಸುತ್ತಾರೆ. ತಂದೆಯನ್ನು ಕಳೆದುಕೊಂಡ ಮಗಳು ಮತ್ತು ಗಂಡನನ್ನು ಕಳೆದುಕೊಂಡ ಹೆಂಡತಿಯ ಕಣ್ಣಿನಲ್ಲಿ ನೋಡುವಾಗ ಅದುವರೆಗೆ ನೋಡಿದ ಎಲ್ಲ ದೃಶ್ಯಗಳೂ ಬೇರೆಯದೇ ಧ್ವನಿಯನ್ನು ಹೊರಡಿಸಲಾರಂಭಿಸುತ್ತದೆ. ಸಾಮಾನ್ಯ ಸಂಗತಿಯಾಗಿದ್ದುದೇ ಧ್ವನಿಪೂರ್ಣವಾಗಿ ಕಾಣಿಸಲಾರಂಭಿಸುತ್ತದೆ. ಜಡ ವಸ್ತುವಾಗಿದ್ದದ್ದು ಪ್ರತಿಮೆಯಾಗಿ ಹೊಳೆಯಲಾರಂಭಿಸುತ್ತದೆ.

ಕುಟುಂಬವೊಂದರ ಸದಸ್ಯನನ್ನು ಕಳೆದುಕೊಂಡ ಆ ಇಬ್ಬರ ಮನಸ್ಥಿತಿಗೂ, ಬ್ಯಾಟರಿ ಡೆಡ್ ಆಗಿ ಸ್ಟಾರ್ಟ್ ಆಗದೆ ನಿಂತುಕೊಂಡಿರುವ ಕಾರಿಗೂ ಹಲವು ಸಾಮ್ಯತೆಗಳು ಕಾಣಲಾರಂಭಿಸುತ್ತವೆ. ಕಾರಿನೊಳಗೇ ಕೂತು ಬೆವತಿರುವ ಹುಡುಗಿಯ ಕಣ್ಣಲ್ಲಿನ ನೀರಿಗೂ, ಗಂಡನ ಜೊತೆಗೆ ಕಳೆದ ದಿನಗಳನ್ನು ನೆನಪಿಸಿಕೊಳ್ಳುವ ಅಮ್ಮನ ಭಾವುಕತೆಯೂ, ಅವರಿಬ್ಬರೂ ಪರಸ್ಪರ ಛೇಡಿಸಿಕೊಳ್ಳುತ್ತ, ನಗುತ್ತ ಇರಲು ಪ್ರಯತ್ನಿಸುವ ಪರದಾಟಕ್ಕೂ ಬೇರೆಯದೇ ಅರ್ಥಗಳು ಹೊಳೆಯಲಾರಂಭಿಸುತ್ತವೆ. ಅಪ್ಪನ ಸಾವಿನಿಂದ ನಿಂತಿದ್ದ ಬದುಕಿನ ಗಾಡಿಯ ಬ್ಯಾಟರಿಯನ್ನೂ ಮಗಳು ಮತ್ತೆ ಚಾರ್ಜ್ ಮಾಡಿಕೊಂಡು ಮುಂದಕ್ಕೆ ಸಾಗಬೇಕಿದೆ.

ಹೀಗೆ ಒಂದು ಸಾಮಾನ್ಯವೆನಿಸುವ ಘಟನೆಯ ಮೂಲಕ ಒಂದು ಕುಟುಂಬದ, ಎರಡು ಪಾತ್ರಗಳ ಜೀವನದ ಒಳತೋಟೆಯನ್ನು ಹಿಡಿದಿಡುವ ಈ ಕಿರುಚಿತ್ರ ತನ್ನ ಧ್ವನಿಶಕ್ತಿಯಿಂದಲೇ ಬಹುಕಾಲ ಕಾಡುತ್ತದೆ.

ಈ ಕಿರುಚಿತ್ರ ವೀಕ್ಷಣೆಗೆ https://bit.ly/2WRAa8M ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.